ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹೊನ್ನಾವರ.

ಸಿಸಿ ನಂಃ 610/2018

ಪಿ ಡಬ್ಲುಃ 04

ಸಿ ಡಬ್ಲುಃ 08

| | |
|---|---|
| ಸಾಕ್ಷಿದಾರರ ಹೆಸರು | ಅಬ್ದುಲ್ ಹಮೀದ್ ಶೇಖ್ |
| ತಂದೆಯ ಹೆಸರು | ಪಕೀರ ಸಾಬ್ |
| ವಯಸ್ಸು | 45 ವರ್ಷ |
| ಉದ್ಯೋಗ | ಪೋಲಿಸ ಹೆಡ್ ಕಾನಸ್ಟೇಬಲ್, ಭಟ್ಕಳ ಗ್ರಾಮೀಣ ಪೋಲಿಸ ಠಾಣೆ |
| ವಾಸ್ತವ್ಯ | ಭಟ್ಕಳ |

ಸಾಕ್ಷಿಯನ್ನು ದಿನಾಂಕಃ 11.06.2025 ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ನಾನು 2012 ರಿಂದ 2018 ರವರೆಗೆ ಹೊನ್ನಾವರ ಪೋಲಿಸ್ ಠಾಣೆಯಲ್ಲಿ ಪೋಲಿಸ ಕಾನಸ್ಟೇಬಲ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 16.04.2017 ರಂದು ಚಾಸಾ 1 ರವರು ಠಾಣಾ ಪ್ರಭಾರದಲ್ಲಿದ್ದಾಗ ಮದ್ಯಾಹ್ನ 3 ಗಂಟೆ ಸಮಯದಲ್ಲಿ ಬಾತ್ಮಿದಾರರು ಅವರಿಗೆ ಫೋನ್ ಮೂಲಕ ಕರೆ ಮಾಡಿ ಕಡತೋಕಾ ಕ್ರಾಸ್ ಬಳಿ ಇರುವ ಶ್ರೀನಿವಾಸ ಶಂಕರ ಮಡಿವಾಳರವರ ಮನೆಯಲ್ಲಿ ಅಕ್ರಮವಾಗಿ ಲಾಟರಿ ವ್ಯವಹಾರ ನಡೆಸುತ್ತಿದ್ದಾರೆ ಎಂದು ಮಾಹಿತಿಯನ್ನು ನೀಡಿದ್ದರಿಂದ, ಅವರು ಸದ್ರಿ ವಿಚಾರವನ್ನು ಮೇಲಾಧಿಕಾರಿಗಳಿಗೆ ತಿಳಿಸಿ ಅವರ ಮಾರ್ಗದರ್ಶನ ಪಡೆದು ನಂತರ ಸಿಬ್ಬಂದಿಗಳಾದ ನನ್ನನ್ನು ಹಾಗೂ ಚಾಸಾ 6, 7, 9 ಮತ್ತು 10 ರವರನ್ನು ಜೊತೆಗೆ ಕರೆದುಕೊಂಡು ಮಾಹಿತಿ ಬಂದ ಸ್ಥಳಕ್ಕೆ ಸುಮಾರು 3.45 ರ ಸಮಯಕ್ಕೆ ತಲುಪಿ ಸ್ವಲ್ಪ ದೂರದಲ್ಲಿ ನಮ್ಮ ವಾಹನ ನಿಲ್ಲಿಸಿದೆವು. ಆನಂತರ ಚಾಸಾ 1 ರವರು ನನಗೆ ಇಬ್ಬರು ಪಂಚರನ್ನು ಕರೆದುಕೊಂಡು ಬರುವಂತೆ ಸೂಚಿಸಿದ್ದರಿಂದ, ನಾನು ಪಂಚರಾದ ಚಾಸಾ 2 ಮತ್ತು 3 ರವರಿಗೆ ಮಾಹಿತಿಯನ್ನು ನೀಡಿ ಅವರನ್ನು ಬರಮಾಡಿಕೊಂಡು ಸ್ವಲ್ಪ ದೂರ ನಡೆದುಕೊಂಡು ಹೋಗಿ, ನಾವೆಲ್ಲರೂ ಅಲ್ಲಿ ವೀಕ್ಷಣೆ ಮಾಡಿದಾಗ ಶ್ರೀನಿವಾಸ ಶಂಕರ ಮಡಿವಾಳ ರವರ ಮನೆಯ ಹತ್ತಿರ ಕೆಲವು ಜನ ಸೇರಿಕೊಂಡು ಲಕ್ಕಿ ಡಿಪ್ ಆಟ ಆಡುತ್ತಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು ಅದಕ್ಕೆ ಸಂಬಂಧಿಸಿದ ವಸ್ತುಗಳು ಕೂಡ ಸ್ಥಳದಲ್ಲಿಯೇ ಇದ್ದವು. ಅದನ್ನು ಖಚಿತಪಡಿಸಿಕೊಂಡು ಚಾಸಾ 1 ರವರು ಮತ್ತು ನಾವು ದಾಳಿ ಮಾಡಿದಾಗ ಕೆಲವು

ಜನರು ಓಡಿಹೋಗಿರುತ್ತಾರೆ. ಚಾಸಾ 1 ಮತ್ತು ಸಿಬ್ಬಂದಿಗಳಾದ ನಾವು ಒಟ್ಟೂ 5 ಜನರನ್ನು ಹಿಡಿದಿದ್ದು, ಚಾಸಾ 1 ರವರು ಹಿಡಿದ ವ್ಯಕ್ತಿಯ ಹೆಸರು ಕೇಳಲಾಗಿ ಶ್ರೀನಿವಾಸ ಶಂಕರ ಮಡಿವಾಳ ಎಂದು ತಿಳಿಸಿರುತ್ತಾರೆ. ಸದ್ರಿಯವರು ಲಕ್ಕಿ ಕೂಪನ್ ಮೂಲಕ ಸಾರ್ವಜನಿಕರಿಗೆ ಗಿಫ್ಟ್ ನೀಡುತ್ತಿರುವ ಬಗ್ಗೆ ಒಪ್ಪಿಕೊಂಡಿರುತ್ತಾರೆ. ಉಳಿದ ನಾಲ್ಕು ಜನರ ಹೆಸರು ನಾಗರಾಜ ದೇಶಬಂಢಾರಿ, ನಾಗೇಶ ನಾಯ್ಕು, ಮಂಜುನಾಥ ದೇಶಬಂಡಾರಿ ಮತ್ತು ತಿಮ್ಮಪ್ಪ ನಾಯ್ಕು ಆಗಿರುತ್ತದೆ. ಸ್ಥಳದಲ್ಲಿದ್ದ ಗೃಹಬಳಕೆ ವಸ್ತುಗಳನ್ನು ನಿ.ಪಿ. 1 ರ ಪಂಚನಾಮೆಯ ಜೊತೆಗೆ ಲಗತ್ತಿಸಲಾಗಿರುತ್ತದೆ, ಅವುಗಳನ್ನು ಪಂಚನಾಮೆ ಮೂಲಕ ಪಂಚರ ಸಮಕ್ಷಮ ವಶಕ್ಕೆ ಪಡೆದಿರುತ್ತೇವೆ. ಸದ್ರಿ ಪಂಚನಾಮೆಯನ್ನು ಸಂಜೆ 4.50 ರಿಂದ 6.50 ರವರೆಗೆ ಜರುಗಿಸಿರುತ್ತೇವೆ. ನಂತರ ಠಾಣೆಗೆ ಬಂದು ವಶಕ್ಕೆ ಪಡೆದ ಸ್ವತ್ತುಗಳು, ಪಂಚನಾಮೆ ಮತ್ತು ಆರೋಪಿತರೊಂದಿಗೆ ಸರ್ಕಾರದ ಪರವಾಗಿ ಚಾಸಾ 1 ರವರು ಚಾಸಾ 12 ರವರಿಗೆ ದೂರನ್ನು ನೀಡಿರುತ್ತಾರೆ. ಆನಂತರ ನಾವು ಹಿಡಿದುಕೊಂಡಂತಹ ಆರೋಪಿಗಳನ್ನು ಠಾಣೆಗೆ ಕರೆತರಲಾಯಿತು. ಸಾಕ್ಷಿಯು ಎಂ.ಒ–1 ರಿಂದ 4 ರ ವಸ್ತುಗಳನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ನಿ.ಪಿ. 4 ಮತ್ತು 5 ರ ಫೋಟೊಗಳನ್ನು ನೋಡಿ ಗುರುತಿಸಿರುತ್ತಾರೆ. ಸದ್ರಿ ದಿನ ನಾವು ಹಿಡಿದ 5 ಜನ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿರುವ 6 ಜನ ಆರೋಪಿತರಲ್ಲಿ 5 ಜನ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. 2, 3, 5 ಮತ್ತು 7 ನೇ ಆರೋಪಿತರು ಗೈರು ಹಾಜರಾಗಿದ್ದು ಆರೋಪಿ ಪರ ವಕೀಲರು ಮಾಫಿ ಅರ್ಜಿ ಸಲ್ಲಿಸಿ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದು ಹೇಳಿದ್ದರಿಂದ ಕ್ರಮವನ್ನು ಕೈಬಿಡಲಾಯಿತು.

**ಪಾಟೀ ಸವಾಲುಃ ಶ್ರೀ ವಿ.ಆರ್.ಎನ್. ವಕೀಲರಿಂದಃ**

ಘಟನೆ ನಡೆಯುವ ಪೂರ್ವದಲ್ಲಿ ಬೀಟ್ ಕೆಲಸ ಮಾಡುವಾಗ ಆರೋಪಿತರ ಪರಿಚಯ ನನಗಿತ್ತು. ಸ್ಥಳದಲ್ಲಿ ಚಾಸಾ 1 ರವರು 1 ನೇ ಆರೋಪಿಯ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದ್ದಾರೆ. ಸದ್ರಿ ಘಟನಾ ಸ್ಥಳವನ್ನು ಚಾಸಾ 1 ರವರಿಗೆ ನಾವೇ ತೋರಿಸಿದ್ದೇವೆ. ಚಾಸಾ 1 ರವರಿಗೆ ಮಾಹಿತಿ ಬಂದ ನಂತರ ಅವರು ಆರೋಪಿಯ ಹೆಸರು ಮತ್ತು ವಿಳಾಸವನ್ನು ನಮಗೆ ಹೇಳಿದರು.

1 ನೇ ಆರೋಪಿಯು ನಮ್ಮ ಠಾಣಾ ಅಧಿಕಾರಿಗಳ ಮೇಲೆ ಮೇಲಿನ ಅಧಿಕಾರಿಗಳಿಗೆ ದೂರನ್ನು ಸಲ್ಲಿಸಿದ್ದಾರೆ. ಹೊನ್ನಾವರದಿಂದ ಚಂದಾವರಕ್ಕೆ ಹೋಗುವ ರಸ್ತೆಯ ಪೂರ್ವ ದಿಕ್ಕಿಗೆ 1 ನೇ ಆರೋಪಿಯ ಮನೆ ಬರುತ್ತದೆ. ನಾವು ಕಡತೋಕಾ ಕ್ರಾಸ್ ನಲ್ಲಿ ಚಾಸಾ 2 ಮತ್ತು 3 ರವರನ್ನು ಬರಮಾಡಿಕೊಂಡಿದ್ದೇವೆ. 2 ನೇ ಆರೋಪಿಯು ಆ ದಿನ ಘಟನಾ ಸ್ಥಳದಿಂದ ನಮ್ಮನ್ನು ನೋಡಿ ಓಡಿ ಹೋಗಿದ್ದಾನೆ. ಚಾಸಾ 2 ಮತ್ತು 3 ರವರನ್ನು ನಾನೇ ಕರೆದುಕೊಂಡು ಬಂದಿದ್ದೇನೆ. ಚಾಸಾ 2 ಮತ್ತು 3 ರವರ ಹೆಸರು ನನಗೆ ಈಗ ಸರಿಯಾಗಿ ನೆನಪಿಗೆ ಬರುತ್ತಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದೆ ಓಡಿ ಹೋದನೆಂದು ತೋರಿಸಿದ ಆರೋಪಿಯ ಹೆಸರನ್ನು ಕೇಳಲಾಗಿ, ಆತನ ಹೆಸರು ನಾಗರಾಜ ಗಣಪತಿ ನಾಯ್ಕ ಆಗಿರುತ್ತದೆ ಹಾಗೂ ಆತನು ಪ್ರಸ್ತುತ ಪ್ರಕರಣದಲ್ಲಿ 6 ನೇ ಆರೋಪಿಯಾಗಿರುತ್ತಾನೆ. ನಾವು ಮಾರನೇ ದಿನ 6 ನೇ ಆರೋಪಿಯನ್ನು ಅರೆಸ್ಟ್ ಮಾಡಿರುತ್ತೇವೆ. ಚಾಸಾ 1 ರವರು ತರುವಾಯ ಅರೆಸ್ಟ್ ಮಾಡಿದ ಆರೋಪಿತರನ್ನು ನಾನು ನೋಡಿದ್ದೇನೆ. ಆ 5 ಜನರಲ್ಲಿ ಯಾರೂ ಪಂಚರಾಗಿರುವುದಿಲ್ಲ. ನಾವು ಘಟನಾ ಸ್ಥಳಕ್ಕೆ ಹೋದಾಗ ಸ್ಥಳದಲ್ಲಿ ಅಂದಾಜು 20 ಜನ ಇದ್ದರು. ಅಲ್ಲಿ 1 ನೇ ಆರೋಪಿಯು ಲಾಟರಿ ಬಗ್ಗೆ ಕೂಗುತ್ತಿದ್ದನು. ಚಾಸಾ 1 ರವರು ಎಷ್ಟು ಲಾಟರಿಯನ್ನು ಕೊಟ್ಟಿದ್ದರು ಹಾಗೂ ಎಷ್ಟು ಹಣವನ್ನು ಪಡೆದಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಆದರೆ ಅಲ್ಲಿ ಯಾವುದೇ ಹಣದ ವ್ಯವಹಾರ ಆಗಿದ್ದು ಇರುವುದಿಲ್ಲ.

5 ಜನ ಆರೋಪಿತರು ಕುಳಿತುಕೊಂಡಾಗ ನಾವು ಅವರನ್ನು ಹಿಡಿದಿದ್ದೇವೆ. ಇನ್ನುಳಿದವರು ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ. ನಿ.ಪಿ. 1ರ ಜೊತೆ ಲಗತ್ತಿಸಿರುವ ಮನೆ ಬಳಕೆಯ ಉಪಕರಣಗಳು ಎಲ್ಲಾ ಹೊಸದಾಗಿದ್ದವು. ಚಾಸಾ 1 ಮತ್ತು ಇನ್ನುಳಿದ ಆರೋಪಿತರ ಜೊತೆ ಯಾವುದೇ ಮಾತುಕತೆ ಆದ ಬಗ್ಗೆ ನನಗೆ ಮಾಹಿತಿ ಇಲ್ಲ. ಪಂಚನಾಮೆಯ ಕಾಲಕ್ಕೆ ವಸ್ತುಗಳನ್ನು ವಶಕ್ಕೆ ಪಡೆದುಕೊಂಡು ಅವುಗಳಿಗೆ ಸೀಲ್ ಅಂಟಿಸಿದ್ದು ಇರುವುದಿಲ್ಲ. ಮುದ್ದೆಮಾಲು-1 ರ ಪ್ಲಾಸ್ಟಿಕ್ ನಾಣ್ಯಗಳನ್ನು ಸ್ಥಳದಲ್ಲಿ ಲೆಕ್ಕ ಹಾಕಿದಾಗ 2,000 ಇತ್ತು. ಸದ್ರಿ ನಾಣ್ಯಗಳಿಗೆ ಬಟ್ಟೆಯನ್ನು ಸುತ್ತಿ ಪಂಚರ ಸಹಿ ಪಡೆದಿದ್ದು ಇರುವುದಿಲ್ಲ. ಮುದ್ದೆಮಾಲು-2 ಘಟನಾ ಸ್ಥಳದಲ್ಲಿ ಇತ್ತು. ಚಾಸಾ 1 ರವರು ಮುದ್ದೆಮಾಲು-2 ನ್ನು ಓದಿ ನೋಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. 1 ನೇ ಆರೋಪಿಯು ಮುದ್ದೆಮಾಲು-2 ನ್ನು ಚಾಸಾ 1 ರವರಿಗೆ ನೀಡಿದ್ದಾರೆ. 1 ನೇ ಆರೋಪಿಯು ಚಾಸಾ 1 ರವರ ಮುಂದೆ ಮುದ್ದೆಮಾಲು-2 ಲಾಟರಿ ಕುರಿತಾಗಿ ಇರುತ್ತದೆ ಎಂದು ಹೇಳಿದ್ದಾರೆ. ಪಂಚನಾಮೆಯ ಕಾಲಕ್ಕೆ ಫೋಟೋ ತೆಗೆದ ಬಗ್ಗೆ ನನಗೆ ಮಾಹಿತಿ ಇಲ್ಲ. ಚಾಸಾ 7 ರವರು ನಿ.ಪಿ. 1 ನ್ನು ಬರೆದಿದ್ದಾರೆ. ಆ ದಿನ ನಾವು ಮುದ್ದೆಮಾಲು 1 ರಿಂದ 4 ನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ 2 ಮತ್ತು 3 ರವರನ್ನು ನಾವು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ ಹಾಗೂ ಅವರ ಸಹಿಯನ್ನು ಠಾಣೆಯಲ್ಲಿ ಪಡೆದಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ ಇದೆ/-

ಪ್ರ.ದ.ನ್ಯಾದಂ., ಹೊನ್ನಾವರ.